ಜಿಲ್ಲಾ ಪರಿಷತ್ತಿನಿಂದ ಕೊಳವೆ ಬಾವಿ ಕೊರೆತಕ್ಕೆ ಖರ್ಚಾದ ಹಣ

1134 (1912) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಗ್ರಾಮಾಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್‌ನಿಂದ ಪ್ರತಿ ತಾಲ್ಲೂಕಿನಲ್ಲಿ 1990-91, 1991-92ನೇ ಸಾಲಿನಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಸದರಿ ಕೊಳವೆ ಬಾವಿ ಕೊರೆಯುವ ಮೊದಲು ಸಾರ್ವಜನಿಕ ಆರೋಗ್ಯ (ಪಿಹೆಚ್‌ಇ) ಇಂಜಿನೀಯರ್ ತಜ್ಞರ ಅಭಿಪ್ರಾಯ ಪಡೆಯಲಾಗಿದೆಯೆ?

ಇ) ಹಾಗಿದ್ದಲ್ಲಿ ಸದರಿ ತಜ್ಞರ ಅಭಿಪ್ರಾಯದ ಪ್ರಕಾರ ಎಲ್ಲಾ ಕೊಳವೆ ಬಾವಿಗಳಲ್ಲಿ ನೀರು ಬಿದ್ದಿದೆಯೋ ಅಥವಾ ಇಲ್ಲವೆ?

ಈ) ಕೊಳವೆ ಬಾವಿಗಳನ್ನು ತೆರೆಯಲು ಯಾವ ಏಜೆನ್ಸಿಯವರಿಗೆ ವಹಿಸಿಕೊಡಲಾಗಿತ್ತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕಂದಾಯ ಸಚಿವರು) :

ಅ) 1990-91ರಲ್ಲಿ ಒಟ್ಟು 354 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಖರ್ಚಾದ ಹಣ ರೂ. 54.89 ಲಕ್ಷಗಳು. 1991-92ರಲ್ಲಿ ಡಿಸೆಂಬರ್ 91ರವರೆಗೆ ಒಟ್ಟು 220 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಖರ್ಚಾದ ಹಣ ರೂ. 29.38 ಲಕ್ಷ ರೂ.ಗಳು. ವಿವರಗಳು ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	1990-91		1991-92	
		ಕೊರೆದ ಕೊಳವೆ ಬಾವಿಗಳ ಸಂಖ್ಯೆ	ಖರ್ಚಾದ ಹಣ ರೂ. ಲಕ್ಷಗಳಲ್ಲಿ	ಕೊರೆದ ಕೊಳವೆ ಬಾವಿಗಳ	ಖರ್ಚಾದ ಹಣ ರೂ. ಲಕ್ಷಗಳಲ್ಲಿ
1.	ಧಾರವಾಡ	15	2.87	11	2.21
2.	ಹುಬ್ಬಳ್ಳಿ	17	3.84	12	2.40
3.	ಕಲಘಟಗಿ	22	4.02	14	1.68
4.	ಕುಂದಗೋಳ	14	3.28	5	1.00
5.	ಶಿಗ್ಗಾಂವ್	50	11.66	8	1.72
6.	ಹಾವೇರಿ	28	3.62	6	1.55
7.	ಹಾನಗಲ್	35	1.81	38	3.96
8.	ಹಿರೇಕೆರೂರು	24	2.96	51	0.83
9.	ರಾಣೆಬೆನ್ನೂರು	30	3.59	26	4.32

10.	ಬ್ಯಾಡಗಿ	33	3.41	9	2.87
11.	ಸವಣೂರು	6	0.99	21	0.76
12.	ಗದಗ್	16	2.78	12	2.84
13.	ಮುಂಡರಗಿ	6	1.00	1	0.20
14.	ನರಗುಂದ	8	1.34	-	0.32
15.	ನವಲಗುಂದ	16	2.10	-	1.11
16.	ರೋಣ್	18	3.08	6	0.41
17.	ಶಿರಹಟ್ಟಿ	16	2.04	-	1.20
	ಒಟ್ಟು	354	54.89	220	29.38

ಅ) ಪಿ.ಹೆಚ್.ಇ. ಇಲಾಖೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಭೂ ವಿಜ್ಞಾನಿಗಳಿಂದ ಅಭಿಪ್ರಾಯ ಪಡೆಯಲಾಗಿದೆ.

ಇ) ಕೊರೆದಿರುವ ಕೊಳವೆ ಬಾವಿಗಳಲ್ಲಿ ಸುಮಾರು ಶೇಖಡ 92ರಷ್ಟು ಯಶಸ್ವಿಯಾಗಿದೆ.

ಈ) 1) ಇಲಾಖೆ ರಿಗ್‌ಗಳ ಮೂಲಕ 2) ವೆಲೆಯನ್‌ಗಿರಿ ಬೋರ್‌ವೆಲ್ಸ್ 3) ಶಂಕರ್ ಬೋರ್‌ವೆಲ್ಸ್ 4) ಜಲದಾರ್ ಬೋರ್‌ವೆಲ್ಸ್ 5) ಕರ್ನಾಟಕ ಆಗ್ರೊ ಇಂಡಸ್ಟ್ರೀಸ್ ಕಾರ್ಪೋರೇಷನ್, ಧಾರವಾಡ 6) ಕಿಸಾನ್ ರಿಗ್ ಸರವೀಸ್ 7) ಅಭಯ ಡ್ರಿಲ್ಲಿಂಗ್ 8) ಶ್ರೀಮಿಕ ಡ್ರಿಲ್ಲಿಂಗ್ ಕಂಪೆನಿ 9) ಭಾಗಿರಥಿ ಬೋರ್‌ವೆಲ್ಸ್ 10) ಸೋನಿ ಬೋರ್‌ವೆಲ್ಸ್.

ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು

1135 (1913) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯು ಯಾವ ಯಾವ ಕಾಮಗಾರಿ ಕೆಲಸಗಳನ್ನು ಎಂದು ಕೈಗೆತ್ತಿಕೊಳ್ಳಲಾಯಿತು. ಅದಕ್ಕೆ ತಗಲಿದ ಖರ್ಚಿನ ವಿವರವೇನು;

ಆ) ಸದರಿ ಯೋಜನೆ ಪ್ರಾರಂಭವಾದಾಗ ರಾಜ್ಯ ಸರ್ಕಾರದಿಂದ ತಯಾರಿಸಲ್ಪಟ್ಟ ಯೋಜನೆ ನಕ್ಷೆ ಹಾಗೂ ಯೋಜನಾ ಅಂದಾಜು ಪಟ್ಟಿಯ ವಿವರವೇನು;

ಇ) ಸದರಿ ಯೋಜನೆ ಪೂರ್ತಿಗೊಳಿಸಲು ಇನ್ನು ಎಷ್ಟು ಹಣ ಬೇಕು; ಹಾಗೂ ಸದರಿ ಕಾರ್ಯವನ್ನು ಪೂರ್ತಿಗೊಳಿಸಲು ಎಷ್ಟು ದಿವಸಗಳು ಬೇಕಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ನಿರ್ಮಾಣವಾಗುತ್ತಲಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮುಖ್ಯ ಕಾಮಗಾರಿಗಳನ್ನು ಪ್ರಾರಂಭ ಮಾಡಿದ ವರ್ಷ ಹಾಗೂ ಅವುಗಳ ಮೇಲೆ ಮಾಡಿರುವ ಖರ್ಚಿನ ವಿವರಗಳು.